KACD420021352024

# ಹೊಳಲ್ಕೆರೆಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ

## ಸಿ.ಸಿ. ನಂಃ 1321/2024

ಪಿರ್ಯಾದಿದಾರರು : ಸರ್ಕಾರದ ಪರವಾಗಿ–ಅಬಕಾರಿ ನಿರೀಕ್ಷಕರು ಹೊಳಲ್ಕೆರೆ ವಲಯ, ಹೊಳಲ್ಕೆರೆ ಪೋಲೀಸ್ ಠಾಣೆ

ಆರೋಪಿ : ಶ್ರೀಮತಿ ಕೆ. ಲೀಲಾ ಕೋಂ ಸುಧೀರ

## ದೋಷಾರೋಪಣೆ

ಶ್ರೀ ಉಮೇಶ, ಎಂ.ಪಿ., ಬಿ.ಎ.ಎಲ್., ಎಲ್.ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ಹೊಳಲ್ಕೆರೆ ಆದ ನಾನು

ಆರೋಪಿಃ ಶ್ರೀಮತಿ ಕೆ. ಲೀಲಾ ಕೋಂ ಸುಧೀರ
ವಯಸ್ಸುಃ *40* ವರ್ಷಗಳು*,* ವೃತ್ತಿಃ ಕೂಲಿಕೆಲಸ*,*
ವಾಸಃ ಶಿವಪುರ ಗ್ರಾಮ*,* ಹೊಳಲ್ಕೆರೆ ತಾಲ್ಲೂಕು .

ಆರೋಪಿತನಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

ದಿನಾಂಕಃ11-04-2024 ರಂದು ಸಾಯಂಕಾಲ 4-15 ರ ಸಮಯದಲ್ಲಿ ಹೊಳಲ್ಕೆರೆ ವಲಯ ವ್ಯಾಪ್ತಿಯಲ್ಲಿರುವ ಶಿವಪುರ ಗ್ರಾಮದ ಕಡೆಯಿಂದ ಕಡೂರು ಗ್ರಾಮದ ಆರೋಪಿತಳಾದ ನೀನು ತಮ್ಮ ಅಡಿಕೆ ಗೋಡಾನ್ ನಲ್ಲಿ ಅಕ್ರಮವಾಗಿ ಕಾನೂನು ಬಾಹಿರವಾಗಿ ಯಾವುದೇ ಪರವಾನಿಗೆಯನ್ನು ಹೊಂದದೇ ಒಟ್ಟು 19.980 ಲೀಟರ್ ಮದ್ಯವನ್ನು ಅಕ್ರಮವಾಗಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ದಾಸ್ತಾನು ಮಾಡಿರುತ್ತೀರಿ. ಈ ಮೂಲಕ ಆರೋಪಿತಳಾದ ನೀನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಕರ್ನಾಟಕ ಅಬಕಾರಿ ಕಾಯ್ದಿ ಕಲಂ 32(1) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರಿ.

ಈ ಮೇಲೆ ಹೇಳಿದ ಅದೇ ದಿನ ಸ್ಥಳ ವೇಳೆಯಲ್ಲಿ ಆರೋಪಿತಳಾದ ನೀನು ಕಾನೂನು ಬಾಹಿರವಾಗಿ ಸಮಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದೇ 19.980 ಲೀಟರ್ ಮದ್ಯವನ್ನು ಅಕ್ರಮವಾಗಿ ಸ್ವಾಧೀನ ಹೊಂದಿ ಕರ್ನಾಟಕ ಅಬಕಾರಿ ಕಾಯಿದೆ ಕಲಂ 14, 15 ಮತ್ತು 43(ಎ)ನ್ನು ಉಲ್ಲಂಘನೆ ಮಾಡಿ ಕಲಂ 38(ಎ) ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರೆಂದು ಆಪಾದಿಸಲಾಗಿದೆ.

ನೀನು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

**ಸಿವಿಲ್ ನ್ಯಾಯಾಧೀಶರು ಮತ್ತು**

ದಿಃ05-12-2024 **ಜೆ ಎಂ ಎಫ್ ಸಿ, ಹೊಳಲ್ಕೆರೆ.**